**ದಿಃ-27-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ಪ್ರತಿವಾದಿ ನಂ.2 ಪರ ಶ್ರೀ. ಎನ್.ಬಿ.ಎಸ್ ವಕೀಲರಿಂದ ಃ**

1. ಡೆಲ್ಟಾ ಡೈಕಾಸ್ಟ್ ಎಂಬ ಪಾಲುದಾರತ್ವದ ಸಂಸ್ಥೆ ಯಾವಾಗ ಪ್ರಾರಂಭವಾಯಿತು ಎಂದು ಕೇಳಿದಾಗ ಸಾಕ್ಷಿಯು ಆಚೆ ಈಚೆ ನೋಡಿಕೊಂಡು ಯಾವಾಗ ಆಯಿತು ಎಂದು ಕೇಳಿರುತ್ತಾರೆ. ಅದರಲ್ಲಿ ಜಗನ್ನಾಥ, ಸುಕುಮಾರನ್ ಮೆನನ್, ರೆಮಿಜಿಯಸ್ ನವೀನ್ ಮತ್ತು ನಾನು ಅದರ ಪಾರ್ಟನರ್ಸ್ ಆಗಿರುತ್ತೇವೆ.

2. ಜಗನ್ನಾಥ, ನವೀನ್ ಮತ್ತು ನಾನು ತಲಾ ಶೇ.30 ರಷ್ಟು ಬಂಡವಾಳವನ್ನು ಹೂಡಿರುತ್ತೇವೆ ಮತ್ತು ಸುಕುಮಾರನ್ ರವರು ಶೇ.10 ರಷ್ಟು ಬಂಡವಾಳವನ್ನು ಹೂಡಿರುತ್ತೇವೆ. ಸುಕುಮಾರನ್ ಮೆನನ್ ರವರು ಮ್ಯಾನೇಂಜಿಂಗ್ ಪಾರ್ಟನರ್ ಅಲ್ಲ ಎಂದರೆ ಸರಿ ಅವರು ಸ್ಲೀಪಿಂಗ್ ಪಾರ್ಟನರ್ ಆಗಿರುತ್ತಾರೆ. ಸುಕುಮಾರನ್ ರವರಿಗೆ ಯಾವುದೇ ಚೆಕ್ಕುಗಳಿಗೆ ಸಹಿ ಮಾಡುವಂತಹ ಅಧಿಕಾರವಾಗಲೀ ಮತ್ತು ಬ್ಯಾಂಕ್ ಖಾತೆಗಳನ್ನು ಆಪರೇಟ್ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿಯು ಮೊದಲು ಇರಲಿಲ್ಲ ನಾನು ಪಾರ್ಟನರ್ ಷಿಪ್ ಬಿಟ್ಟು ಬಂದ ನಂತರ ಅವರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾವು ಪಾರ್ಟನರ್ ಷಿಪ್ ಡೀಡನ್ನು

ಮಾಡಿರುತ್ತೇವೆ. ಈ ಪಾರ್ಟನರ್ ಷಿಪ್ ಡೀಡನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

3. ಸಾಕ್ಷಿಗೆ ಕಡತದಲ್ಲಿರುವಂತಹ ದಾಖಲೆಗಳನ್ನು ತೋರಿಸಿ ಅದರಲ್ಲಿ ಪಾರ್ಟನರ್ ಷಿಪ್ ಡೀಡನ್ನು ತೋರಿಸುವಂತೆ ಕೇಳಿದಾಗ ಸಾಕ್ಷಿಯು ಕಡತದಲ್ಲಿರುವ ದಾಖಲೆಗಳನ್ನು ಪರಾಂಬರಿಸಿ ಈ ದಾಖಲೆಯಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನಾನು ಸುಕುಮಾರನ್ ಮೆನನ್ ಜೊತೆ ಯಾವುದೇ ಪಾರ್ಟನರ್ ಷಿಪ್ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

4. ಈ ಪಾರ್ಟನರ್ ಷಿಪ್ ಡೀಡ್ ನ ಪ್ರಕಾರ ಈ ಸಂಸ್ಥೆಯಲ್ಲಿ ನಾನು ಪ್ರೊಡಕ್ಷನ್ ಮತ್ತು ಪ್ಲಾನಿಂಗ್ ಕೆಲಸವನ್ನು ಮಾಡಬೇಕಾಗಿತ್ತು. ಜಗನ್ನಾಥರವರು ಲೆಕ್ಕ ಮತ್ತು ಹಣಕಾಸು ವಿಭಾಗ ನೋಡುತ್ತಿದ್ದರು. ನಮ್ಮ ಸಂಸ್ಥೆಯಲ್ಲಿ ಅಲುಮಿನಿಯಂ ಕಾಸ್ಟಿಟಂಗ್ಸ್ ನ್ನು ಉತ್ಪಾದನೆ ಮಾಡುತ್ತಿದ್ದೆವು. ನಾವು ನಮ್ಮ ಬಂಡವಾಳದಿಂದ ಕಚ್ಚಾ ವಸ್ತುಗಳನ್ನು ಖರೀದಿ ಮಾಡುತ್ತಿರಲಿಲ್ಲ ಕಾರಣ ನಮಗೆ ಗ್ರಾಹಕರೇ ಕಚ್ಚಾ ವಸ್ತುಗಳನ್ನು ಸರಬರಾಜು ಮಾಡುತ್ತಿದ್ದರು. ಒಬ್ಬೊಬ್ಬರು ಶೇ.30 ಎಂದು ಹೇಳಿದ್ದು ಅದು ಒಬ್ಬೊಬ್ಬರಿಗೆ ತಲಾ ರೂ.3,00,000/-ವಾಗಿರುತ್ತದೆ ಹಾಗೆಯೇ ಶೇ.10 ಎಂದರೆ ಆ ವ್ಯಕ್ತಿ ರೂ.1,00,0000/-ವನ್ನು

ಹಾಕಬೇಕಾಗಿರುತ್ತದೆ. ಈ ಸಂಸ್ಥೆಗೆ ನಾವು ಅದೇ ರೀತಿ ಬಂಡವಾಳವನ್ನು ಹೂಡಿರುತ್ತೇವೆ.

5. ಜಗನ್ನಾಥರವರಲ್ಲಿ ನಾವು ಉತ್ಪಾದಿಸಲು ಬೇಕಾದ ಮಿಷಿನರಿಗಳು ಇತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮೆಷಿನರಿಗೆ ಮತ್ತು ಅದನ್ನು ನಡೆಸಲು ಬೇಕಾದಂತಹ ಸವಲತ್ತುಗಳಿಗೆ ಒಟ್ಟು ರೂ.10,00,000/-ಕ್ಕಿಂತ ಹೆಚ್ಚಿನ ಖರ್ಚು ಆಗಿರುತ್ತದೆ. ರೂ.10,00,000/-ಕ್ಕಿಂತ ಹೆಚ್ಚಾಗಿರುವ ಖರ್ಚನ್ನು ಜಗನ್ನಾಥರವರು ಹಾಕಿದ್ದು ಅದಕ್ಕೆ ಅವರಿಗೆ ಬಡ್ಡಿಯನ್ನು ಸೇರಿಸಿ ನಮ್ಮ ಸಂಸ್ಥೆಯಿಂದ ನೀಡಲಾಗಿದೆ. ಅದಕ್ಕೆ ಸಂಬಂಧಿಸಿ ಜಗನ್ನಾಥರವರು ನಮ್ಮಿಂದ ಸಹಿಯನ್ನು ಪಡೆದು ಒಂದು ದಾಖಲೆಯನ್ನು ಇಟ್ಟಿದ್ದರು. ಅದನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ.

6. ನಾನು ನನ್ನ ಪಾಲಿನ ಶೇ.30 ಅಂದರೆ ರೂ.3,00,000/-ವನ್ನು ಕಂಪೆನಿಯ ಖಾತೆಗೆ ಹಾಕಿರುತ್ತೇನೆ ಆದರೆ ಆ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಡೆಲ್ಟಾ ಡೈಕಾಸ್ಟ್ ಸಂಸ್ಥೆಯ ಪಾರ್ಟನರ್ ಎಂದು ತೋರಿಸಲು ಯಾವ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

7. ಸಾಕ್ಷಿಗೆ ನಿ.ಪಿ.1 ಬಿಡುಗಡೆ ಪತ್ರವನ್ನು ತೋರಿಸಿ ಇದು ಯಾವಾಗ ಮಾಡಲಾಗಿದೆ ಎಂದು ಕೇಳಲಾಗಿ ಸಾಕ್ಷಿಯು ನನಗೆ ಸರಿಯಾಗಿ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ನಮಗೆ ಪಾರ್ಟನರ್ ಷಿಪ್ ಸಂಸ್ಥೆಯಲ್ಲಿ ಹೊಂದಾಣಿಕೆಯಾಗದಿದ್ದುದ್ದರಿಂದ ನಾನು ಮತ್ತು ನವೀನ್ ರವರು ಆ ಸಂಸ್ಥೆಯಿಂದ ಹೊರಗೆ ಬರಲು ನಿರ್ಧರಿಸಿರುತ್ತೇವೆ.

8. ನಾನು ಸಂಸ್ಥೆ ಪ್ರಾರಂಭವಾದಾಗಿನಿಂದ ನಾನು ಬಿಡುಗಡೆಯಾಗುವವರೆಗೂ ಯಾವುದೇ ಹಣವನ್ನು ಪಡೆದಿರುವುದಿಲ್ಲ ಕಾರಣ ಆ ಹಣವನ್ನು ನಾವು ಸಾಲ ತೀರಿಸಲು ಉಪಯೋಗಿಸಿರುತ್ತೇವೆ. ಸಂಸ್ಥೆ ಪ್ರಾರಂಭವಾದ ದಿನದಿಂದ ನಾನು ಬಿಡುವವರೆಗೆ ಮಾಸಿಕ ತಲಾ ರೂ.5,000/-ವರೆಗೆ ಪಡೆದಿರುತ್ತೇನೆ. ಇವುಗಳ ಬಗ್ಗೆ ನಮ್ಮ ಬ್ಯಾಲೆಂಸ್ ಷೀಟ್ ನಲ್ಲಿ ನಮೂದಾಗಿದೆಯೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ ಅದನ್ನು ಜಗನ್ನಾಥರವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಸಂಸ್ಥೆ ಪ್ರಾರಂಭವಾದಾಗಿನಿಂದ ಹಿಡಿದು ನಾನು ಬಿಡುಗಡೆ ಹೊಂದುವವರೆಗಿನ ಬ್ಯಾಲೆಂಸ್ ಷೀಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

9. ಡೆಲ್ಟಾ ಡೈಕಾಸ್ಟ್ ಸಂಸ್ಥೆಯನ್ನು ನಾನು ಬಿಡುಗಡೆ ಹೊಂದುವ ಮೊದಲೇ ಅದು ಮತ್ತೊಮ್ಮೆ ರಿಕಾನ್ಸ್ಟಿಟ್ಯೂಟ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

10. ನಿ.ಪಿ.1 ನ್ನು ನಾನು ಸ್ವಲ್ಪ ಓದಿರುತ್ತೇನೆ. ನನಗೆ ಆಂಗ್ಲ ಭಾಷೆ ಅರ್ಥವಾಗುವುದಿಲ್ಲ. ನಿ.ಪಿ.1 ನ್ನು ಯಾರು ಎಲ್ಲಿ ಬರೆಸಿರುತ್ತಾರೆ ಎಂದು ಗೊತ್ತಿದೆ. ಅದನ್ನು ಜಗನ್ನಾಥರವರು ಸುಕುಮಾರನ್ ಮೆನನ್ ರವರ ಆಡಿಟರ್ ಮುಖಾಂತರ ಮಾಡಿಸಿರುತ್ತಾರೆ. ನಿ.ಪಿ.2 ಮತ್ತು 3 ನ್ನೂ ಸಹ ಜಗನ್ನಾಥರವರು ಸುಕುಮಾರನ್ ಮೆನನ್ ರವರ ಆಡಿಟರ್ ಮುಖಾಂತರವೇ ಮಾಡಿಸಿರುತ್ತಾರೆ. ನಾನು ಆ ಲೆಕ್ಕ ಪತ್ರಗಳನ್ನು ನೋಡಿ ಸರಿಯಾಗಿರುತ್ತವೆ ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ. ನಾನು ದಿನಾಂಕ 31.10.2012 ರಿಂದ ಆ ಸಂಸ್ಥೆಯ ಪಾರ್ಟನರ್ ಆಗಿ ಇರಲಿಲ್ಲ. ಸಾಕ್ಷಿ ಮುಂದುವರಿದು ನಾನು ಯಾವ ದಿನ ನಿ.ಪಿ.1 ನ್ನು ಮಾಡಿರುತ್ತೇನೋ ಆ ದಿನ ನಾನು ಬಿಡುಗಡೆ ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ನಂತರ 3 ತಿಂಗಳು ನಾನು ತರಬೇತಿಯನ್ನು ನೀಡಲು ಅಲ್ಲಿ ಹೋಗುತ್ತಿದ್ದೆ.

11. ನಿ,ಪಿ.1 ರಂತೆ ನನಗೆ 02.02.2013 ರಂದು ರೂ.1,00,000/- ಸಂದಾಯವಾಗಿದೆ ಎಂದರೆ ಸರಿ. ಈ ಹಣವನ್ನು ಚೆಕ್ ಮುಖಾಂತರ

ನೀಡಿರುತ್ತಾರೆ. ಚೆಕ್ಕನ್ನು ಸಂಸ್ಥೆಯ ಹೆಸರಲ್ಲಿ ನೀಡಿರುತ್ತಾರೆ. 2016 ರಲ್ಲಿ ಡೆಲ್ಟಾ ಡೈಕಾಸ್ಟ್ ನ ಪಾರ್ಟನರ್ ಆಗಿ ಜಗನ್ನಾಥ ಹಾಗು ಸುಕುಮಾರನ್ ಮೆನನ್ ರವರು ಇರುತ್ತಾರೆ. ನಾನು ದಾವೆ ಹೂಡುವ ಮೊದಲೇ ಸುಕುಮಾರನ್ ಮೆನನ್ ರವರೂ ಸಹ ಆ ಸಂಸ್ಥೆಯನ್ನು ಬಿಟ್ಟು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2015 ರ ನಂತರ ವಿ.ಜೆ.ಕುಮಾರ್ ರವರು ಡೆಲ್ಟಾ ಡೈಕಾಸ್ಟ್ ನ ಪಾರ್ಟನರ್ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವೆ ಹೂಡುವ ಮೊದಲೇ ವಿ.ಜೆ.ಕುಮಾರ್ ರವರು ಡೆಲ್ಟಾ ಡೈಕಾಸ್ಟ್ ನ ಪಾರ್ಟನರ್ ಆಗಿದ್ದರಿಂದ ಅವರನ್ನು ನಾನು ಅಗತ್ಯ ಪಕ್ಷಗಾರರನ್ನಾಗಿ ಮಾಡಬೇಕಾಗಿತ್ತು ಎಂದರೆ ಅವರು ಪಾಲುದಾರರಾದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

(ಮಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**